ಎರಡು ವರ್ಷಗಳ ಹಿಂದೆ ನಮ್ಮ ತಂತ್ರಜ್ಞಾನ ನಗರಿ ಬೆಂಗಳೂರಿನ ದಕ್ಷಿಣ ಭಾಗದ ಪೊಲೀಸ್‌ಠಾಣೆಯೊಂದರಲ್ಲಿ ಠಾಣಾಧಿಕಾರಿಯಾಗಿದ್ದಾಗ ನಡೆದ ಕೌತುಕಮಯ ಘಟನಾವಳಿಯೊಂದನ್ನು ಇಲ್ಲಿ ವಿವರಿಸಿದ್ದೇನೆ. ಪೊಲೀಸ್ ಇಲಾಖೆಯಲ್ಲಿ ಪ್ರತಿನಿತ್ಯ ಎದುರಾಗುವ ಎಲ್ಲ ವಿಭಿನ್ನ, ವಿಶಿಷ್ಟ ಅನುಭವ ಕಥನಗಳನ್ನು ದಾಖಲಿಸ ಹೊರಟರೆ ಬೃಹತ್ ಸಂಪುಟಗಳನ್ನೇ ಹೊರತರಬಹುದು. ಒಂದೊಂದಾಗಿ ಎಲ್ಲವುಗಳನ್ನು ನಾನು ಹೇಳುವುದೂ, ತಾವು ಓದಿದುವುದೂ ಇದ್ದದ್ದೇ. ಅಂತಹವುಗಳ ಸಾಲಿನಲ್ಲಿ ಎದ್ದುಕಾಣುವ ಈ ಅನುಭವ ಕಥನ ಹಸುಕಂದನ ಅಪಹರಣದ ಕುರಿತಾದ್ದು. ಅನೇಕ ಮುಖಗಳಿರುವ ಈ ಪ್ರಕರಣಕ್ಕೆ ಸಂಪೂರ್ಣ ಅಪರಾಧ ಹಿನ್ನೆಲೆ ಇರದಿದ್ದರೂ ನಮ್ಮನ್ನು ಕಂಗೆಡಿಸಿ ಹಲವಾರು ದಿನಗಳ ಕಾಲ ಆತಂಕಕ್ಕೆ ದೂಡಿತ್ತು. ವಿವಿಧ ಮನಃಸ್ಥಿತಿಯ ಅಪರಾಧಿಗಳೊಂದಿಗೆ ಬೆರೆಯುತ್ತ ಎಷ್ಟೋ ಬಾರಿ ಜೀವದ ಹಂಗು ತೊರೆದು ಪ್ರಕರಣ ಭೇದಿಸಲು ಹೊರಡುವ ನಮಗೆ ಇಂತಹ ಪ್ರಕರಣಗಳು ಎದುರಾಗುವುದು ಕೊಂಚ ವಿರಳವೇ.

## ಪ್ರಕರಣದ ಆರಂಭ

ಹೊರಗೆ ಬಿಸಿಲು ಝಳಪಿಸುತ್ತಿತ್ತು.

ಯೂನಿಫಾರ್ಮು ಒಳಗಿದ್ದ ದೇಹ ಬೆವೆತು ಒಂಥರಾ ಕಮಟಾದ ಘಮಲು! ಅಂತಹ ಹೊತ್ತಿನಲ್ಲೇ ಆತ ದಯಮಾಡಿಸಿದ್ದು. ಹೆಸರು ಅಸ್ಗರ್ ಅಂತ ಹೇಳಿದ. ಹಾಕಿದ್ದ ಉಡುಪು ಕೊಳಕುಮಯವಾಗಿತ್ತು. ಹಳೇ ಚಪ್ಪಲಿ ಮೆಟ್ಟಿಕೊಂಡಿದ್ದ. ಹಣೆ ಮೇಲಿಂದ ಬೆವರು ಕವಲಾಗಿ ಇಳಿಯುತ್ತಿತ್ತು. ದಾಪುಗಾಲಿಕ್ಕಿಕೊಂಡು ಬಂದದ್ದಕ್ಕೆ ಏದುಸಿರು. ಕಣ್ಣುಗಳಲ್ಲಿ ಆತಂಕ.

'ಮೇರಾ ಬೇಟಿ ಕಿಡ್ನಾಪ್ ಹೋಗಯಾ ಸಾ...' ದನಿಯಲ್ಲಿ ಉದ್ವಿಗ್ನತೆ ಇಣುಕುತ್ತಿತ್ತು.

ಒಂದು ಕ್ಷಣ ಅವನನ್ನೇ ನೋಡಿದೆ. 'ಮೊದಲು ಕೂತ್ಕೋ... ವಿವರವಾಗಿ ಹೇಳು...'

ಮುಂದಿದ್ದ ಕುರ್ಚಿಯಲ್ಲಿ ಕೂತ. ಒಣಗಿದ್ದ ತುಟಿಗಳನ್ನು ನಾಲಗೆಯಲ್ಲಿ ಸವರಿಕೊಂಡ. ಕುಡಿವ ನೀರು ತರಿಸಿದೆ. ಕತ್ತೆತ್ತಿಕೊಂಡು ಕುಡಿದ. ಅವನ ಗಂಟಲ ಮೂಳೆ ಮೇಲೆ ಕೆಳಗಾಗುವುದನ್ನೇ ನೋಡಿದೆ. ಜೊತೆಯಲ್ಲಿ ಬಂದಿದ್ದ ನಾಲ್ವರು ಉಳಿದ ಕುರ್ಚಿಗಳನ್ನು ಆಕ್ರಮಿಸಿಕೊಂಡರು. ನೆರೆಹೊರೆಯವರಿರಬೇಕು. ಎಲ್ಲರ ಮುಖದಲ್ಲೂ ಕಾತರ.

ನೀರು ಕುಡಿದವನು ಕೈಲಿದ್ದ ಫೋಟೊವನ್ನು ಮುಂದೆ ಚಾಚಿದ. ಇಸಿದುಕೊಂಡೆ. ಮುದ್ದಾದ ಹೆಣ್ಣು ಮಗು, ಸುಮಾರು ಎರಡೂವರೆ ವರ್ಷವಿರಬಹುದು.

'ಅಮ್ಮೂ ಅಂತ ಕರೀತಿದ್ವು ಸಾ... ಬೆಳಗ್ಗೆ ಚಾಕ್ಲೇಟು ತರಾಕಂತ ನನ್ ನಾದ್ನಿ ಮಗಾ ಮತ್ತು ಇದು ಎಲ್ಡೂ ಪಕ್ಕದ ದುಖಾನಿಗೆ ಹೋಗಿದ್ದಾವೆ. ದಿನಾ ಹೋಗ್ತಿದ್ವು, ತಂದು ತಿನ್ತಿದ್ವು... ಕ್ಯಾಬೀ ಪ್ರಾಬ್ಲಂ ನಯೀ ಥಾ. ಅಂಗಡೀದೂ ನಮ್ದೂಕೆ ಪರಿಚಯ ಇರೋರ್ದೇ. ಚಾಕ್ಲೇಟು ತಿಂದ್ಕೊಂಡು ಅಲ್ಲೇ ನಿಂತಿದ್ದನ್ನ ಜನಾನೂ ನೋಡೌರೆ... ಅದಾಗಿ ಸ್ವಲ್ಪ ಹೊತ್ನಲ್ಲೇ ಕಿಡ್ನಾಪ್ ಆಗ್ಯೈತೆ...'

'ಕಿಡ್ನಾಪ್... ಕಿಡ್ನಾಪ್ ಅಂತೀಯಲ್ಲ... ಅಷ್ಟ್ ಕರೆಕ್ಟಾಗಿ ಹೆಂಗೆ ಹೇಳ್ತೀಯಾ?... ನೀನು ನೋಡ್ದಾ? ಕೂಸು ತಾನೇ ತಪ್ಪಿಸ್ಕೊಂಡ್ ಹೋಗಿದ್ರೆ?...'

ಅಸ್ಗರ್ ಅಡ್ಡಡ್ಡ ತಲೆಯಾಡಿಸಿದ. ಕೈಲಿದ್ದ ಮೊಬೈಲ್‌ನ ಮುಂದೆ ಹಿಡಿದ. ಯಾವುದೋ ಸಿಸಿಟೀವಿ ದೃಶ್ಯಾವಳಿಯಿದ್ದಂತಿತ್ತು. ಬಾಲಕನೊಬ್ಬ ಮಗುವನ್ನು ಕಂಕುಳಲ್ಲಿ ಹಿಡಿದು ಸರಸರನೆ ನಡೆದು ಹೋಗುತ್ತಿದ್ದ.